# ಕರ್ನಾಟಕ ಸರ್ಕಾರ
## ವಾಣಿಜ್ಯ ತೆರಿಗೆಗಳ ಇಲಾಖೆ

ಸಂಖ್ಯೆ.ಸಿಸಿಡಬ್ಲ್ಯೂ.ಸಿಆರ್.79/2011-12

ವಾಣಿಜ್ಯ ತೆರಿಗೆ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂದಿನಗರ,
ಬೆಂಗಳೂರು-560009, ದಿನಾಂಕ.22.03.2012.

**ವಾಣಿಜ್ಯ ತೆರಿಗೆ ಆಯುಕ್ತರವರ ಸುತ್ತೋಲೆ ಸಂಖ್ಯೆ:48:11-12**

ವಿಷಯ: 2011ರ ಕರ್ನಾಟಕ ನಾಗರೀಕ ಸೇವಾ ಖಾತರಿ ಅದಿನಿಯಮ- ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಒದಗಿಸಬೇಕಾದ ಸೇವೆಗಳನ್ನು ವಿವಿಧ ಹಂತಗಳಲ್ಲಿ ನಿಗದಿಪಡಿಸುವ ಬಗ್ಗೆ.

ಉಲ್ಲೇಖ: 1)ಸರ್ಕಾರದ ಮುಖ್ಯ ಕಾರ್ಯದರ್ಶಿ ಇವರ ಪತ್ರದ ಸಂಖ್ಯೆ: ಡಿಪಿಎಆರ್:25 ಇಕಾಆ 2012 ದಿನಾಂಕ:15-02-2012
2)ಈ ಕಛೇರಿಯ ಪತ್ರ ಸಂಖ್ಯೆ:ವಾತೆಇ:ಸಿಸಿಡಬ್ಲ್ಯೂ.ಸಿಆರ್.79/2011-12 ದಿನಾಂಕ:01-03-2012.

– 0 –

ಕರ್ನಾಟಕ ನಾಗರೀಕ ಸೇವಾ ಖಾತರಿ ಅದಿನಿಯಮ 2011 ರಡಿಯಲ್ಲಿ ವಾಣಿಜ್ಯ ತೆರಿಗೆಗಳ ಇಲಾಖೆಗೆ ಸಂಬಂಧಿಸಿದಂತೆ ಹತ್ತು ಸೇವೆಗಳನ್ನು ಗುರುತಿಸಲಾಗಿದ್ದು ಅವುಗಳನ್ನು ನಿಗದಿತ ಕಾಲಮಿತಿಯೊಳಗೆ ಅರ್ಜಿದಾರರಿಗೆ ಒದಗಿಸಬೇಕಾಗಿರುತ್ತದೆ.

2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ತಮ್ಮ ಉಲ್ಲೇಖಿತ ಪತ್ರದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಒದಗಿಸಬೇಕಾದ ಸೇವೆಗಳನ್ನು ನಿಗದಿತ ಕಾಲಮಿತಿಯೊಳಗೆ ಒದಗಿಸುವ ನಿಟ್ಟಿನಲ್ಲಿ ಪ್ರತಿಯೊಂದು ಸೇವೆಯ ಪೂರೈಕೆಗೆ ಅಗತ್ಯವಿರುವ ಹಂತವಾರು ಹಿಂಬಾಲಿಕ ಕ್ರಮಗಳನ್ನು ಮತ್ತು ಅವುಗಳಿಗೆ ಬೇಕಾಗುವ ಸಮಯವನ್ನು ನಿಗದಿಪಡಿಸಲು ಸೂಚಿಸಿರುತ್ತಾರೆ.

3. ಅದರಂತೆ ಹಿಂಬಾಲಿಕ ಕ್ರಮಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಸೇವೆಗೆ ನಿಗದಿಪಡಿಸಿರುವ ಒಟ್ಟು ಕಾಲಮಿತಿಯನ್ನು ವಿವಿಧ ಹಿಂಬಾಲಿಕೆಯಲ್ಲಿ ಹಂಚಿಕೆ ಮಾಡಬೇಕಾದ ಅವಶ್ಯಕತೆ ಇರುತ್ತದೆ. ಈ ಬಗ್ಗೆ ಇಲಾಖಾ ಅಧಿಕಾರಿಗಳ ಅಭಿಪ್ರಾಯವನ್ನು ಪಡೆಯಲಾಗಿದ್ದು ಅವುಗಳನ್ನು ಪರಿಶೀಲಿಸಲಾಗಿದೆ. ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಒದಗಿಸಲಾಗುವ ಸೇವೆಗಳಿಗೆ ಅಗತ್ಯ ಹಂತವಾರು ಹಿಂಬಾಲಿಕ ಕ್ರಮಗಳನ್ನು ಗುರುತಿಸಿ ಪ್ರತಿಯೊಂದು ಹಂತದಲ್ಲೂ ಸಾಮಾನ್ಯವಾಗಿ ಅಗತ್ಯವಿರುವ ಸಮಯವನ್ನು ಅನುಬಂಧದಲ್ಲಿರುವಂತೆ ನಿಗದಿಪಡಿಸಲಾಗಿದೆ.

4. ಎಲ್ಲಾ ಸಂಬಂಧಿತ ಅಧಿಕಾರಿಗಳು 2011ರ ಕರ್ನಾಟಕ ನಾಗರೀಕ ಸೇವಾ ಖಾತರಿ ಅದಿನಿಯಮದಡಿ ವಾಣಿಜ್ಯ ತೆರಿಗೆಗಳ ಇಲಾಖೆಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ಸೇವೆಗಳನ್ನು ನಿಗದಿಪಡಿಸಿದ ಕಾಲಮಿತಿಯೊಳಗೆ ಒದಗಿಸುವಲ್ಲಿ ಯಾವುದೇ ವಿಳಂಬಕ್ಕೆ ಅವಕಾಶ ನೀಡದಂತೆ ಸಕಾಲದಲ್ಲಿ ಒದಗಿಸತಕ್ಕದೆಂದು ಸೂಚಿಸಲಾಗಿದೆ. ಹಿಂಬಾಲಿಕ ಕ್ರಮಗಳ ಬಗ್ಗೆ ಹಂತವಾರು ನಿಗದಿ ಮಾಡಿರುವ ಸಮಯ ಗರಿಷ್ಠ ಸಮಯವಾಗಿದ್ದು, ಅಂತಹ ಕ್ರಮಗಳನ್ನು ನಿಗದಿತ ಸಮಯಕ್ಕಿಂತ ಮುಂಚೆಯೇ ನಿರ್ವಹಿಸಲು ಎಲ್ಲಾ ಅಧಿಕಾರಿಗಳು ಮತ್ತಿತರು ಪ್ರಯತ್ನಿಸತಕ್ಕದ್ದು, ಮುಂದುವರೆದು, ಗುರುತಿಸಿದ ಯಾವುದೇ ಹಿಂಬಾಲಿಕ ಕ್ರಮದ ಅಗತ್ಯವಿಲ್ಲವೆಂದು ಪರಿಗಣಿಸಿದ ಪ್ರಕರಣಗಳಲ್ಲಿ ಸಂಬಂಧಿತ ಅಧಿಕಾರಿಗಳು ಅಂತಹ ಕ್ರಮವನ್ನು ಗಣನೆಗೆ ತೆಗೆದುಕೊಳ್ಳದೆ, ಮಿಕ್ಕ ಹಿಂಬಾಲಿಕ ಕ್ರಮಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು. ಅದಿಕೃತ ಅಧಿಕಾರಿಗಳು ಪ್ರತಿ ಪ್ರಕರಣದಲ್ಲೂ ಹಿಂಬಾಲಿಕ ಕ್ರಮಕ್ಕೆ ಜವಾಬ್ದಾರರಾದ ಪರಿವೀಕ್ಷಕರು ಮತ್ತು ವಿಷಯ ನಿರ್ವಾಹಕರು ನಿಗದಿ ಮಾಡಿದ ಸಮಯದಲ್ಲಿ ತಮ್ಮ ಕಾರ್ಯವನ್ನು ಪೂರ್ಣಗೊಳಿಸುವುದನ್ನು

ಖಚಿತಪಡಿಸಿಕೊಳ್ಳವುದು ಮತ್ತು ವಿಳಂಬವಾದ ಪ್ರಕರಣಗಳಲ್ಲಿ, ಪ್ರತಿ ಹಂತದಲ್ಲಿನ ವಿಳಂಬದ ವಿವರಗಳನ್ನು ಸೂಕ್ತವಾಗಿ ದಾಖಲಿಸತಕ್ಕದ್ದು.

ಎಲ್ಲಾ ಸಂಬಂಧಿಸಿದ ಅಧಿಕಾರಿಗಳು ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

ಅಡಕ: ಅನುಬಂಧ ಪುಟ
ಸಂಖ್ಯೆ:1 ರಿಂದ 7

(ಪ್ರದೀಪ್ ಸಿಂಗ್ ಖರೋಲ)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

ಇವರುಗಳಿಗೆ:

1. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ)–1, ವಾಣಿಜ್ಯ ತೆರಿಗೆ ಕಾರ್ಯಾಲಯ, ಬೆಂಗಳೂರು.
2. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ)–2, ವಾಣಿಜ್ಯ ತೆರಿಗೆ ಕಾರ್ಯಾಲಯ, ಬೆಂಗಳೂರು.
3. ಎಲ್ಲಾ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರುಗಳು ಮೌಲ್ಯವರ್ಧಿತ ತೆರಿಗೆ ವಿಭಾಗ (ಆಡಳಿತ),1,2,3,4,5 ಮತ್ತು 6ನೇ ವಿಭಾಗ, ಬೆಂಗಳೂರು.
4. ಎಲ್ಲಾ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರುಗಳು ಮೌಲ್ಯವರ್ಧಿತ ತೆರಿಗೆ ವಿಭಾಗ (ಆಡಳಿತ), ಮೈಸೂರು/ಮಂಗಳೂರು/ಶಿವಮೊಗ್ಗ/ಧಾರವಾಡ/ಬೆಳಗಾಂ/ಗುಲ್ಬರ್ಗ ಮತ್ತು ದಾವಣಗೆರೆ.
5. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಕಿರಿಯ ಕಾಯ್ದೆ) ಬೆಂಗಳೂರು.
6. ಎಲ್ಲಾ ಅಧಿಕೃತ ಅಧಿಕಾರಿಗಳು/ಸಕ್ಷಮ ಮತ್ತು ಮೇಲ್ಮನವಿ ಪ್ರಾಧಿಕಾರಗಳು.
7. ವಾಣಿಜ್ಯ ತೆರಿಗೆ ಉಪ ಆಯುಕ್ತರು (ಇ–ಆಡಳಿತ), ಗಣಕ ಕೇಂದ್ರ, ವಾಣಿಜ್ಯ ತೆರಿಗೆ ಕಾರ್ಯಾಲಯ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.

ಪ್ರತಿಯನ್ನು:

ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) 6ನೇ ಮಹಡಿ, ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ಬೀದಿ, ಬೆಂಗಳೂರು–560001 ಇವರಿಗೆ ಮಾಹಿತಿಗಾಗಿ.

# ಅನುಬಂಧ

| ಕ್ರಸಂ | ಸೇವೆಗಳು | ಹಂತವಾರು ಹಿಂಬಾಲಿಕ ಕ್ರಮ | ಅಧಿಕೃತ ಅಧಿಕಾರಿಗಳ ಹೆಸರು, ಮತ್ತು ಹುದ್ದೆ | ಪ್ರತಿಯೊಂದು ಹಂತದಲ್ಲೂ ಬೇಕಾಗುವ ಸಮಯ | ಅಧಿನಿಯಮದಂತೆ ನಿಗದಿ ಪಡಿಸಿದ ಒಟ್ಟು ಸಮಯ. |
|---|---|---|---|---|---|
| 1 | ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003 ರಡಿಯಲ್ಲಿ ನೋಂದಣಿಯನ್ನು ನೀಡುವುದು | ನಿಗದಿತ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿಸಿದ ದಾಖಲೆಗಳ ಜೊತೆಗೆ ನೋಂದಣಿ ಶುಲ್ಕ ರೂ.500/- ಇಲಾಖೆಗೆ ಸಂದಾಯವಾದ ಬಗ್ಗೆ ರಸೀದಿ/ಚಲನ್ ಆನ್ ಲೈನ್‌ನಲ್ಲಿ ಸಲ್ಲಿಕೆ. | http:// Ctax.Kar.nic.in | ತಕ್ಷಣ | 15 ದಿನಗಳು |
| | | 1. **ಅರ್ಜಿ ಸ್ವೀಕೃತಿ ಮತ್ತು ಪರಿಶೀಲನೆಗೆ ವರ್ಗಾವಣೆ :** ನಿಗದಿತ ರೂ.500/- ನೋಂದಣಿ ಶುಲ್ಕ ಸಮೇತ ಅರ್ಜಿ ಹಾಗೂ ಸಂಬಂಧಿಸಿದ ದಾಖಲೆಗಳಿಗೆ ಸ್ವೀಕೃತಿ ನೀಡಿದ ನಂತರ ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ಪರಿಶೀಲನೆಗಾಗಿ ವರ್ಗಾಯಿಸುವುದು. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 1 ದಿನ | |
| | | **2.ವಾಣಿಜ್ಯ ತೆರಿಗೆ ಪರಿವೀಕ್ಷಕರಿಂದ ಪರಿಶೀಲನೆ ಮತ್ತು ವರದಿ:** ವಾಣಿಜ್ಯ ತೆರಿಗೆ ಪರಿವೀಕ್ಷಕರಿಂದ ಸ್ಥಳ ಪರಿಶೀಲನೆ ಮತ್ತು ದಾಖಲೆಗಳ ಪರಿಶೀಲನೆ ಹಾಗೂ ವರದಿ ನೀಡಿಕೆ. | ವಾಣಿಜ್ಯ ತೆರಿಗೆ ಪರಿವೀಕ್ಷಕರು . | 5 ದಿನ | |
| | | 3. **ವಾಣಿಜ್ಯ ತೆರಿಗೆ ಪರಿವೀಕ್ಷಕರ ವರದಿಯ ಅವಲೋಕನೆ :** ವಾಣಿಜ್ಯ ತೆರಿಗೆ ಪರಿವೀಕ್ಷಕರ ವ್ಯಾಪಾರ ಸ್ಥಳದ ಪರಿಶೀಲನೆ ಹಾಗೂ ಸಲ್ಲಿಸಿದ ಮೂಲ ದಾಖಲೆಗಳ ಪರಿಶೀಲನಾ ವರದಿ ಸಕ್ಷಮ ಅಧಿಕಾರಿಗಳಿಂದ ಅವಲೋಕನೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 3 ದಿನ | |
| | | **4. ಭದ್ರತಾ ಠೇವಣಿ ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಹಿಂಬರಹ ನೀಡುವುದು:** ಎ) ಯಾವುದೆ ಅಗತ್ಯವಾದ ಹೆಚ್ಚಿನ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅದನ್ನು ಸಲ್ಲಿಸಲು ಮತ್ತು ಬಿ) ನೋಂದಣಿ ನೀಡುವ ಮುನ್ನ ಸಲ್ಲಿಸಬೇಕಾದ ಭದ್ರತಾ ಠೇವಣಿಯನ್ನು ನಿಗದಿ ಪಡಿಸಿ, ಅರ್ಜಿದಾರರಿಗೆ ತಿಳಿಸುವುದು. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 4 ದಿನ | |
| | | 5. **ಅರ್ಜಿಯ ಮೇಲೆ ಅಂತಿಮ ತೀರ್ಮಾನ :** ನೋಂದಣಿ ಅರ್ಜಿಯ ಅನುಮೋದನೆ ಮತ್ತು ನೋಂದಣಿ ನೀಡಿಕೆ ಅಥವಾ ನಿರಾಕರಣೆ ಆದೇಶ ಪ್ರಕ್ರಿಯೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 2 ದಿನ | |

| | | | | | |
|---|---|---|---|---|---|
| 2 | ಕೇಂದ್ರ ಮಾರಾಟ ತೆರಿಗೆ ಅಧಿನಿಯಮ 1956ರಡಿಯಲ್ಲಿ ನೋಂದಣಿಯನ್ನು ನೀಡುವುದು | ನಿಗದಿತ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿಸಿದ ದಾಖಲೆಗಳ ಜೊತೆಗೆ ನೋಂದಣಿ ಶುಲ್ಕ ರೂ.25/– ಇಲಾಖೆಗೆ ಸಂದಾಯವಾದ ಬಗ್ಗೆ ರಸೀದಿ/ಚಲನ್. ಆನ್ ಲೈನ್‌ನಲ್ಲಿ ಸಲ್ಲಿಕೆ. | http://vat.kar.nic.in | ತಕ್ಷಣ | |
| | | **1. ಅರ್ಜಿ ಸ್ವೀಕೃತಿ:** ನಿಗದಿತ ರೂ.25/– ನೋಂದಣಿ ಶುಲ್ಕ ಸಮೇತ ಅರ್ಜಿ ಹಾಗೂ ಸಂಬಂಧಿಸಿದ ದಾಖಲೆಗಳಿಗೆ ಸ್ವೀಕೃತಿ ನೀಡಿದ ನಂತರ ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ಪರಿಶೀಲನೆಗಾಗಿ ವರ್ಗಾಯಿಸುವುದು. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 1 ದಿನ | |
| | | **2. ವಾಣಿಜ್ಯ ತೆರಿಗೆ ಪರಿವೀಕ್ಷಕರಿಂದ ಪರಿಶೀಲನೆ ಮತ್ತು ವರದಿ:** ವಾಣಿಜ್ಯ ತೆರಿಗೆ ಪರಿವೀಕ್ಷಕರಿಂದ ಸ್ಥಳ ಪರಿಶೀಲನೆ ಹಾಗೂ ದಾಖಲೆಗಳ ಪರಿಶೀಲನೆ ಮತ್ತು ವರದಿ ನೀಡಿಕೆ. | ವಾಣಿಜ್ಯ ತೆರಿಗೆ ಪರಿವೀಕ್ಷಕರು . | 5 ದಿನ | |
| | | **3..ವಾಣಿಜ್ಯ ತೆರಿಗೆ ಪರಿವೀಕ್ಷಕರ ವರದಿಯ ಅವಲೋಕನೆ :** ವಾಣಿಜ್ಯ ತೆರಿಗೆ ಪರಿವೀಕ್ಷಕರ ವ್ಯಾಪಾರ ಸ್ಥಳದ ಪರಿಶೀಲನೆ ಹಾಗೂ ಸಲ್ಲಿಸಿದ ಮೂಲ ದಾಖಲೆಗಳ ಪರಿಶೀಲನಾ ವರದಿ ಸಕ್ಷಮ ಅಧಿಕಾರಿಗಳಿಂದ ಅವಲೋಕನೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 3 ದಿನ | |
| | | **4. ಭದ್ರತಾ ಠೇವಣಿ ಹಾಗೂ ಇತರೆ ದಾಖಲೆಗಳ ಸಲ್ಲಿಸದಿದ್ದಲ್ಲಿ ಹಿಂಬರಹ ನೀಡುವುದು:** ಎ) ಯಾವುದೇ ಅಗತ್ಯ ಹಾಗೂ ಹೆಚ್ಚಿನ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅದನ್ನು ಸಲ್ಲಿಸಲು ಮತ್ತು ಬಿ) ನೋಂದಣಿ ನೀಡುವ ಮುನ್ನ ಸಲ್ಲಿಸಬೇಕಾದ ಭದ್ರತಾ ಠೇವಣಿಯನ್ನು ನಿಗದಿ ಪಡಿಸಿ ಅರ್ಜಿದಾರರಿಗೆ ತಿಳಿಸುವುದು. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 4 ದಿನ | 15 ದಿನಗಳು |
| | | **5. ಅರ್ಜಿಯ ಮೇಲೆ ಅಂತಿಮ ತೀರ್ಮಾನ:** ನೋಂದಣಿ ಅರ್ಜಿಯ ಅನುಮೋದನೆ ಮತ್ತು ನೋಂದಣಿ ನೀಡಿಕೆ ಅಥವಾ ನಿರಾಕರಣೆ | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 2 ದಿನ | |
| 3 | ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ 1976ರಡಿಯಲ್ಲಿ ನೋಂದಣಿಯನ್ನು ನೀಡುವುದು. | ನಿಗದಿತ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿತ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಕೆ | http:// Ctax.Kar.nic.in | ತಕ್ಷಣ | |
| | | **1. ಅರ್ಜಿ ಸ್ವೀಕೃತಿ:** ನಿಗದಿತ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿಸಿದ ದಾಖಲೆಗಳಿಗೆ ಸ್ವೀಕೃತಿ ನೀಡಿದ ನಂತರ ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ಪರಿಶೀಲನೆಗಾಗಿ ವರ್ಗಾಯಿಸುವುದು. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ವೃತ್ತಿ ತೆರಿಗೆ ಅಧಿಕಾರಿ. | 1 ದಿನ | |
| | | **2. ವಾಣಿಜ್ಯ ತೆರಿಗೆ ಪರಿವೀಕ್ಷಕರಿಂದ ಪರಿಶೀಲನೆ ಮತ್ತು ವರದಿ:** ವಾಣಿಜ್ಯ ತೆರಿಗೆ ಪರಿವೀಕ್ಷಕರಿಂದ ಸ್ಥಳ ಪರಿಶೀಲನೆ ಹಾಗೂ ದಾಖಲೆಗಳ ಪರಿಶೀಲನೆ ಮತ್ತು ವರದಿ ನೀಡಿಕೆ. | ವಾಣಿಜ್ಯ ತೆರಿಗೆ ಪರಿವೀಕ್ಷಕರು . | 4 ದಿನಗಳು | |

| | | | | | |
|---|---|---|---|---|---|
| | | **3..ವಾಣಿಜ್ಯ ತೆರಿಗೆ ಪರಿವೀಕ್ಷಕರ ವರದಿಯ ಅವಲೋಕನೆ :**<br>ವಾಣಿಜ್ಯ ತೆರಿಗೆ ಪರಿವೀಕ್ಷಕರ ಅರ್ಜಿದಾರರ ಸ್ಥಳದ ಪರಿಶೀಲನೆ ಹಾಗೂ ಸಲ್ಲಿಸಿದ ಮೂಲ ದಾಖಲೆಗಳ ಪರಿಶೀಲನಾ ವರದಿ ಸಕ್ಷಮ ಅಧಿಕಾರಿಗಳಿಂದ ಅವಲೋಕನೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ವೃತ್ತಿ ತೆರಿಗೆ ಅಧಿಕಾರಿ | 2 ದಿನ | |
| | | **4.ಹಿಂಬರಹ ನೀಡಿಕೆ :**<br>ಯಾವುದೇ ಅಗತ್ಯ ಹಾಗೂ ಹೆಚ್ಚಿನ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅದನ್ನು ಸಲ್ಲಿಸಲು ಅರ್ಜಿದಾರರಿಗೆ ತಿಳಿಸುವುದು. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ವೃತ್ತಿ ತೆರಿಗೆ ಅಧಿಕಾರಿ | 4 ದಿನಗಳು | |
| | | **5. ಅರ್ಜಿಯ ಮೇಲೆ ಅಂತಿಮ ತೀರ್ಮಾನ :**<br>ನೋಂದಣಿ ಅರ್ಜಿಯ ಅನುಮೋದನೆ ಮತ್ತು ನೋಂದಣಿ ನೀಡಿಕೆ ಅಥವಾ ನಿರಾಕರಣೆ | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ವೃತ್ತಿ ತೆರಿಗೆ ಅಧಿಕಾರಿ | 2 ದಿನಗಳು | |
| | | 6.ಅರ್ಜಿದಾರರ ಇ-ಮೇಲ್ ಲಭ್ಯವಿಲ್ಲದಿದ್ದ ಪ್ರಕರಣದಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ಅರ್ಜಿದಾರರಿಗೆ ತಲುಪಿಸುವುದು. | ಕರವಸೂಲಿಗಾರರು. | 2 ದಿನಗಳು | 15 ದಿನಗಳು |

| | | | | | |
|---|---|---|---|---|---|
| 4 | ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ 1958ರಡಿಯಲ್ಲಿ ಪರ್ಮಿಟ್ ನೀಡುವುದು. | ನಿಗದಿತ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿತ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಕೆ | http:// Ctax.Kar.nic.in | ತಕ್ಷಣ | |
| | | **1. ಅರ್ಜಿ ಸ್ವೀಕೃತಿ :**<br>ನಿಗದಿತ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿಸಿದ ದಾಖಲೆಗಳ ಸ್ವೀಕೃತಿ ನೀಡಿದ ನಂತರ ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ಪರಿಶೀಲನೆಗಾಗಿ ವರ್ಗಾಯಿಸುವುದು. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಮನೋರಂಜನಾ ತೆರಿಗೆ ಅಧಿಕಾರಿ | 1 ದಿನ | |
| | | **2. ವಾಣಿಜ್ಯ ತೆರಿಗೆ ಪರಿವೀಕ್ಷಕರಿಂದ ಪರಿಶೀಲನೆ ಮತ್ತು ವರದಿ:**<br>ವಾಣಿಜ್ಯ ತೆರಿಗೆ ಪರಿವೀಕ್ಷಕರಿಂದ ಸ್ಥಳ ಪರಿಶೀಲನೆ ಹಾಗೂ ದಾಖಲೆಗಳ ಪರಿಶೀಲನೆ ಮತ್ತು ವರದಿ ನೀಡಿಕೆ. | ವಾಣಿಜ್ಯ ತೆರಿಗೆ ಪರಿವೀಕ್ಷಕರು | 4 ದಿನಗಳು | |
| | | **3.. ವಾಣಿಜ್ಯ ತೆರಿಗೆ ಪರಿವೀಕ್ಷಕರ ವರದಿಯ ಅವಲೋಕನೆ :**<br>ವಾಣಿಜ್ಯ ತೆರಿಗೆ ಪರಿವೀಕ್ಷಕರು ಅರ್ಜಿದಾರರ ಸ್ಥಳದ ಪರಿಶೀಲನೆ ಹಾಗೂ ಸಲ್ಲಿಸಿದ ಮೂಲ ದಾಖಲೆಗಳ ಪರಿಶೀಲನಾ ವರದಿ ಸಕ್ಷಮ ಅಧಿಕಾರಿಗಳಿಂದ ಅವಲೋಕನೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಮನೋರಂಜನಾ ತೆರಿಗೆ ಅಧಿಕಾರಿ | 2 ದಿನಗಳು | |
| | | **4. ಭದ್ರತಾ ಠೇವಣಿ ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಹಿಂಬರಹ ನೀಡುವುದು:**<br>ಎ) ಯಾವುದೇ ಅಗತ್ಯ ಹಾಗೂ ಹೆಚ್ಚಿನ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅದನ್ನು ಸಲ್ಲಿಸಲು.<br>ಬಿ) ನೋಂದಣಿ ನೀಡುವ ಮುನ್ನ ಸಲ್ಲಿಸಬೇಕಾದ ಭದ್ರತಾ ಠೇವಣಿಯನ್ನು ನಿಗದಿ ಪಡಿಸಿ ಅರ್ಜಿದಾರರಿಗೆ ತಿಳಿಸುವುದು. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಮನೋರಂಜನಾ ತೆರಿಗೆ ಅಧಿಕಾರಿ | 4 ದಿನಗಳು | |
| | | **5. ಅರ್ಜಿಯ ಮೇಲೆ ಅಂತಿಮ ತೀರ್ಮಾನ.**<br>ನೋಂದಣಿ ಅರ್ಜಿಯ ಅನುಮೋದನೆ ಮತ್ತು ನೋಂದಣಿ ನೀಡಿಕೆ ಅಥವಾ ನಿರಾಕರಣೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಮನೋರಂಜನಾ ತೆರಿಗೆ ಅಧಿಕಾರಿ | 2 ದಿನಗಳು | |
| | | 6. ನೋಂದಣಿ ಪ್ರಮಾಣ ಪತ್ರವನ್ನು ಅರ್ಜಿದಾರರಿಗೆ ತಲುಪಿಸುವುದು. | ಕರವಸೂಲಿಗಾರರು. | 2 ದಿನಗಳು | 15 ದಿನಗಳು |

| | | | | | |
|---|---|---|---|---|---|
| 5 | ಕರ್ನಾಟಕ ವಿಲಾಸ ತೆರಿಗೆ ಅಧಿನಿಯಮ 1979ರ ಅಡಿಯಲ್ಲಿ ನೋಂದಣಿ ನೀಡುವುದು | ನಿಗದಿತ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿತ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಕೆ | http://ctax.Kar.nic.in | ತಕ್ಷಣ | |
| | | **1. ಅರ್ಜಿ ಸ್ವೀಕೃತಿ ಮತ್ತು ಪರಿಶೀಲನೆಗೆ ವರ್ಗಾವಣೆ:** ನಿಗದಿತ ಅರ್ಜಿನಮೂನೆ ಹಾಗೂ ಸಂಬಂಧಿಸಿದ ದಾಖಲೆಗಳ ಸ್ವೀಕೃತಿ ನೀಡಿದ ನಂತರ ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ಪರಿಶೀಲನೆಗಾಗಿ ವರ್ಗಾಯಿಸುವುದು. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ವಿಲಾಸ ತೆರಿಗೆ ಅಧಿಕಾರಿ | 1 ದಿನ | |
| | | **2. ವಾಣಿಜ್ಯ ತೆರಿಗೆ ಪರಿವೀಕ್ಷಕರಿಂದ ಪರಿಶೀಲನೆ ಮತ್ತು ವರದಿ:** ವಾಣಿಜ್ಯ ತೆರಿಗೆ ಪರಿವೀಕ್ಷಕರಿಂದ ಸ್ಥಳ ಪರಿಶೀಲನೆ ಮತ್ತು ದಾಖಲೆಗಳ ಪರಿಶೀಲನೆ ಹಾಗೂ ವರದಿ ನೀಡಿಕೆ. | ವಾಣಿಜ್ಯ ತೆರಿಗೆ ಪರಿವೀಕ್ಷಕರು . | 4 ದಿನಗಳು | |
| | | **3.. ವಾಣಿಜ್ಯ ತೆರಿಗೆ ಪರಿವೀಕ್ಷಕರ ವರದಿಯ ಅವಲೋಕನೆ :** ವಾಣಿಜ್ಯ ತೆರಿಗೆ ಪರಿವೀಕ್ಷಕರ ಅರ್ಜಿದಾರರ ಸ್ಥಳದ ಪರಿಶೀಲನೆ ಹಾಗೂ ಸಲ್ಲಿಸಿದ ಮೂಲ ದಾಖಲೆಗಳ ಪರಿಶೀಲನಾ ವರದಿ ಸಕ್ಷಮ ಅಧಿಕಾರಿಗಳಿಂದ ಅವಲೋಕನೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ವಿಲಾಸ ತೆರಿಗೆ ಅಧಿಕಾರಿ | 2 ದಿನಗಳು | |
| | | **4.ಭದ್ರತಾ ಠೇವಣಿ ಹಾಗೂ ಇತರೆ ದಾಖಲೆಗಳನ್ನುಸಲ್ಲಿಸದಿದ್ದಲ್ಲಿ ಹಿಂಬರಹ ನೀಡುವುದು :** ಎ) ಯಾವುದೇ ಅಗತ್ಯವಾದ ಹೆಚ್ಚಿನ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅದನ್ನು ಸಲ್ಲಿಸಲು ಮತ್ತು ಬಿ) ನೋಂದಣಿ ನೀಡುವ ಮುನ್ನ ಸಲ್ಲಿಸಬೇಕಾದ ಭದ್ರತಾ ಠೇವಣಿಯನ್ನು ನಿಗದಿ ಪಡಿಸಿ ಅರ್ಜಿದಾರರಿಗೆ ತಿಳಿಸುವುದು. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ವಿಲಾಸ ತೆರಿಗೆ ಅಧಿಕಾರಿ | 4 ದಿನಗಳು | |
| | | **5. ಅರ್ಜಿಯ ಮೇಲೆ ಅಂತಿಮ ತೀರ್ಮಾನ** ನೋಂದಣಿ ಅರ್ಜಿಯ ಅನುಮೋದನೆ ಮತ್ತು ನೋಂದಣಿ ನೀಡಿಕೆ ಅಥವಾ ನಿರಾಕರಣೆ ಆದೇಶ ಪ್ರಕ್ರಿಯೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ವಿಲಾಸ ತೆರಿಗೆ ಅಧಿಕಾರಿ | 2 ದಿನಗಳು | |
| | | 6 ನೋಂದಣಿ ಪ್ರಮಾಣ ಪತ್ರವನ್ನು ಅರ್ಜಿದಾರರಿಗೆ ಜಾರಿ ಮಾಡುವಿಕೆ | ಕರವಸೂಲಿಗಾರರು. | 2 ದಿನಗಳು | 15 ದಿನಗಳು |

| | | | | | |
|---|---|---|---|---|---|
| 6 | ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ರ ಅಡಿಯಲ್ಲಿ ತೀರುವಳಿ ಪ್ರಮಾಣ ಪತ್ರ ನೀಡಿಕೆ | 1.ತಂತ್ರಾಂಶದಲ್ಲಿ ಇರುವಂತೆ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿತ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಕೆ | http://vat.Kar.nic.in | ತಕ್ಷಣ | 15 ದಿನಗಳು |
| | | **2.ಪರಿಶೀಲನೆಗಾಗಿ ಅರ್ಜಿಯ ಹಂಚಿಕೆ :** ಸಂಬಂಧಿಸಿದ ಅವಧಿಯ ಮಾಸಿಕ ನಮೂನೆಗಳು ಮತ್ತು ಇತರೆ ದಾಖಲೆಗಳ ಹಾಗೂ ತೆರಿಗೆ ಪಾವತಿಗಳ ಪರಶೀಲನೆಗಾಗಿ ನಿಗದಿತ ವಿಷಯ ನಿರ್ವಾಹಕರಿಗೆ ಹಂಚಿಕೆ. | ವಿಷಯ ನಿರ್ವಾಹಕರು | 1 ದಿನಗಳು | |
| | | **3. ಪರಿಶೀಲನೆ ಮತ್ತು ವರದಿ ನೀಡಿಕೆ.** ವಿಷಯ ನಿರ್ವಾಹಕರು ಅರ್ಜಿ ಮತ್ತು ತೆರಿಗೆ ಪಾವತಿ ವಿವರಗಳನ್ನು ಪರಿಶೀಲಿಸಿ ಅಧಿಕಾರಿಯವರಿಗೆ ವರದಿ ಸಲ್ಲಿಕೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 3 ದಿನಗಳು | |
| | | **4. ವರದಿ ಪರಿಶೀಲನೆ ಮತ್ತು ಆದೇಶ:** ವಿಷಯ ನಿರ್ವಾಹಕರ ಅರ್ಜಿ ಪರಿಶೀಲನಾ ವರದಿಯಲ್ಲಿ ಹೇಳಿದ ಲೋಪದೋಷಗಳ ಬಗ್ಗೆ ಅರ್ಜಿದಾರರಿಗೆ ಹಿಂಬರಹ ನೀಡಲು ಆದೇಶ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 2 ದಿನಗಳು | |
| | | 5. ತೀರುವಳಿ ಪ್ರಮಾಣ ಪತ್ರ ನೀಡಿಕೆ ಅಥವಾ ನಿರಾಕರಣೆ ಬಗ್ಗೆ ಪ್ರಕ್ರಿಯೆ. | ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 7 ದಿನಗಳು | |
| | | 6.ತೀರುವಳಿ ಪ್ರಮಾಣ ಪತ್ರ ಅಥವಾ ನಿರಾಕರಣೆ ಹಿಂಬರಹ ಜಾರಿ ಮಾಡುವುದು. | ಕರವಸೂಲಿಗಾರರು | 2 ದಿನಗಳು | |
| 7 | ಕೇಂದ್ರ ಮಾರಾಟ ತೆರಿಗೆ ಅಧಿನಿಯಮ 1956ರ ಅಡಿಯಲ್ಲಿ 'ಸಿ' ನಮೂನೆ ನೀಡುವುದು. | 1.ತಂತ್ರಾಂಶದಲ್ಲಿ ಇರುವಂತೆ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿತ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಕೆ | http://vat.kar.nic.in | ತಕ್ಷಣ | 10 ದಿನಗಳು |
| | | 2.ಅನುಮೋದನೆ ಮತ್ತು ಸಿ ನಮೂನೆ ನೀಡಿಕೆ ಅಥವಾ ನಿರಾಕರಣೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಛೇರಿಯ ವಾಣಿಜ್ಯ ತೆರಿಗೆ ಅಧಿಕಾರಿ ಅಥವಾ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಕಛೇರಿಯ ವಾಣಿಜ್ಯ ತೆರಿಗೆ ಅಧಿಕಾರಿ. | 10 ದಿನಗಳು | |

| | | | | | |
|---|---|---|---|---|---|
| 8 | ಕೇಂದ್ರ ಮಾರಾಟ ತೆರಿಗೆ ಅಧಿನಿಯಮ 1956ರ ಅಡಿಯಲ್ಲಿ 'ಹಚ್' ನಮೂನೆ ನೀಡುವುದು. | 1.ತಂತ್ರಾಂಶದಲ್ಲಿ ಇರುವಂತೆ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿತ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಕೆ | http:/vat.Kar.nic.in | ತಕ್ಷಣ | |
| | | **2..ಅನುಮೋದನೆ ಹಾಗೂ ನೀಡಿಕೆ ಅಥವಾ ಅರ್ಜಿಯ ನಿರಾಕರಣೆ ಬಗ್ಗೆ ಪ್ರಕ್ರಿಯೆ.** ವಾಣಿಜ್ಯ ತೆರಿಗೆ ಅಧಿಕಾರಿಯವರಿಂದ ಅರ್ಜಿಯ ಅನುಮೋದನೆ ಅಥವಾ ಲೋಪದೋಷಗಳಿದ್ದಲ್ಲಿ ಹಿಂಬರಹ ನೀಡಿಕೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಛೇರಿಯ ವಾಣಿಜ್ಯ ತೆರಿಗೆ ಅಧಿಕಾರಿ ಅಥವಾ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 10 ದಿನಗಳು | 10 ದಿನಗಳು |
| 9 | ಕೇಂದ್ರ ಮಾರಾಟ ತೆರಿಗೆ ಅಧಿನಿಯಮ 1956ರ ಅಡಿಯಲ್ಲಿ ಎಫ್'ನಮೂನೆ ನೀಡುವುದು. | 1.ತಂತ್ರಾಂಶದಲ್ಲಿ ಇರುವಂತೆ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿತ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಕೆ | http://vat.Kar.nic.in | ತಕ್ಷಣ | 10 ದಿನಗಳು |
| | | **2..ಅನುಮೋದನೆ ಹಾಗೂ ನೀಡಿಕೆ ಅಥವಾ ಅರ್ಜಿಯ ನಿರಾಕರಣೆ ಬಗ್ಗೆ ಪ್ರಕ್ರಿಯೆ :** ವಾಣಿಜ್ಯ ತೆರಿಗೆ ಅಧಿಕಾರಿಯವರಿಂದ ಅರ್ಜಿಯ ಅನುಮೋಧನೆ ಅಥವಾ ಲೋಪದೋಷಗಳಿದ್ದಲ್ಲಿ ಹಿಂಬರಹ ನೀಡಿಕೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಛೇರಿಯ ವಾಣಿಜ್ಯ ತೆರಿಗೆ ಅಧಿಕಾರಿ ಅಥವಾ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 10 ದಿನಗಳು | |
| 10 | ಕೇಂದ್ರ ಮಾರಾಟ ತೆರಿಗೆ ಅಧಿನಿಯಮ 1956ರ ಅಡಿಯಲ್ಲಿ ಇ1 ಮತ್ತು ಇ2 ನಮೂನೆ ನೀಡುವುದು. | **1. ತಂತ್ರಾಂಶದಲ್ಲಿ ಇರುವಂತೆ ನಮೂನೆಯಲ್ಲಿ ಅರ್ಜಿ ಹಾಗೂ ಸಂಬಂಧಿತ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಕೆ** | http://vat.Kar.nic.in | ತಕ್ಷಣ | 10 ದಿನಗಳು |
| | | **2..ಅನುಮೋದನೆ ಹಾಗೂ ನೀಡಿಕೆ ಅಥವಾ ಅರ್ಜಿಯ ನಿರಾಕರಣೆ ಬಗ್ಗೆ ಪ್ರಕ್ರಿಯೆ :** ವಾಣಿಜ್ಯ ತೆರಿಗೆ ಅಧಿಕಾರಿಯವರಿಂದ ಅರ್ಜಿಯ ಅನುಮೋದನೆ ಅಥವಾ ಲೋಪದೋಷಗಳಿದ್ದಲ್ಲಿ ಹಿಂಬರಹ ನೀಡಿಕೆ. | ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಛೇರಿಯ ವಾಣಿಜ್ಯ ತೆರಿಗೆ ಅಧಿಕಾರಿ ಅಥವಾ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿ | 10 ದಿನಗಳು | |